## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 813

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 20.12.2021

ಉತ್ತರಿಸುವ ಸಚಿವರು : ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕಳೆದ 2 ವರ್ಷಗಳಿಂದ ಎಷ್ಟು ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ಕಾರ್ಡ್‌ಗಳನ್ನು ವಿತರಿಸಿದೆ; ( ಮಾಹಿತಿ ನೀಡುವುದು) | 2019-20 ನೇ ಸಾಲಿನಲ್ಲಿ 3,28,624 ಹಾಗೂ 2020-21 ನೇ ಸಾಲಿನಲ್ಲಿ 838 ಒಟ್ಟು 3,29,462 ಆದ್ಯತಾ ಪಡಿತರ (ಬಿ.ಪಿ.ಎಲ್) ಚೀಟಿಗಳು ಹಾಗೂ 2,48,117 ಆದ್ಯತೇತರ (ಎ.ಪಿ.ಎಲ್) ಕಾರ್ಡ್‌ಗಳನ್ನು ವಿತರಿಸಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| (ಆ) | ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ಕಾರ್ಡ್ ಗಳನ್ನು ವಿತರಿಸಲು ಅನುಸರಿಸುತ್ತಿರುವ ಮಾನದಂಡಗಳೇನು; (ಮಾಹಿತಿ ನೀಡುವುದು) | ರಾಜ್ಯದಲ್ಲಿ ಅಂತ್ಯೋದಯ ಅನ್ನ ಮತ್ತು ಆದ್ಯತಾ ಕುಟುಂಬಗಳನ್ನು ಗುರುತಿಸುವ ಬಗ್ಗೆ ರಾಜ್ಯ ಸರ್ಕಾರವು 2017 ರಲ್ಲಿ ಆದೇಶ ಹೊರಡಿಸಿದೆ. ಈ ಆದೇಶದ ಪ್ರಕಾರ ಅಂತ್ಯೋದಯ ಅನ್ನ ಮತ್ತು ಆದ್ಯತಾ(ಬಿ.ಪಿ.ಎಲ್) ಪಡಿತರ ಚೀಟಿಯನ್ನು ಹೊಂದಲು ನಿಗದಿಪಡಿಸಿರುವ ಮಾನದಂಡಗಳು ಕೆಳಕಂಡಂತಿವೆ.<br>• ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ಮಂಡಳಿಗಳು/ನಿಗಮಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ ವ್ಯಾಟ್/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು.<br>• ಗ್ರಾಮೀಣ ಪ್ರದೇಶಗಳಲ್ಲಿ 03 ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶಗಳಲ್ಲಿ 1000 ಚದರ |

| | | |
|---|---|---|
| | | ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು.<br>• ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು.<br>• ಕುಟುಂಬದ ವಾರ್ಷಿಕ ಆದಾಯವು ರೂ. 1.20 ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು. |
| (ಇ) | ಗ್ರಾಮೀಣ ಭಾಗಗಳಲ್ಲಿ ಬಿ.ಪಿ.ಎಲ್ ಕಾರ್ಡ್‌ಗಳನ್ನು ವಿತರಿಸಲು ಆಗುತ್ತಿರುವ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ; ಯಾವ ಕ್ರಮಗಳನ್ನು ತೆಗೆದುಕೊಂಡಿದೆ; | ಕೋವಿಡ್-19 ಲಾಕ್‌ಡೌನ್ ಅವಧಿಯಲ್ಲಿ ಹೊಸ ಪಡಿತರ ಚೀಟಿ ಕೋರಿ ಸಲ್ಲಿಸಿರುವ ಅರ್ಜಿಗಳ ಸ್ಥಳ ಪರಿಶೀಲನೆ ಕಾರ್ಯವು ನಿಧಾನವಾಗಿದ್ದು ಮತ್ತು ಈ ಅವಧಿಯಲ್ಲಿ ಬಯೋಮೆಟ್ರಿಕ್ ಬಳಕೆಯನ್ನು ಹಿಂಪಡೆದಿರುವ ಕಾರಣ ಪಡಿತರ ಚೀಟಿಗಳನ್ನು ವಿತರಿಸುವ ಕಾರ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. |
| (ಈ) | ಬಿ.ಪಿ.ಎಲ್ ಕಾರ್ಡ್‌ಗಳಿಗೆ ನ್ಯಾಯ ಬೆಲೆ ಅಂಗಡಿಗಳಲ್ಲಿ ರೇಷನ್ ನೀಡುವಾಗ ವಯೋವೃದ್ಧರ tumbling press ಬರದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಯಾವ ಪರಿಹಾರ ಮಾರ್ಗಗಳನ್ನು ಕೈಗೊಂಡಿದೆ? | ಹೌದು. ಬಯೋಮೆಟ್ರಿಕ್ ಪಡೆಯುವಲ್ಲಿ ತೊಂದರೆ ಆಗುವ ವಯೋವೃದ್ಧರಿಗೆ ನೆಟ್‌ವರ್ಕ್ ಸಮಸ್ಯೆ ಸಂದರ್ಭದಲ್ಲಿ ಬಯೋಮೆಟ್ರಿಕ್ ಹೊರತುಪಡಿಸಿ ಶೇ.2 ರಷ್ಟು ಪಡಿತರ ಹಂಚಿಕೆ ನೀಡುವ ಅವಕಾಶವು ಜಾರಿಯಲ್ಲಿದೆ. ಇದಲ್ಲದೇ, ಅನಿವಾರ್ಯ ಸಂದರ್ಭಗಳಲ್ಲಿಯೂ ಕೂಡ ಪೂರ್ವಾನುಮತಿಯೊಂದಿಗೆ ಬಯೋಮೆಟ್ರಿಕ್ ಹೊರತುಪಡಿಸಿ ಆಹಾರಧಾನ್ಯ ವಿತರಣೆಗೆ ಅವಕಾಶ ಕಲ್ಪಿಸಲಾಗಿದೆ. |

ಆನಾಸ 303 ಡಿಆರ್‌ಎ 2021 (ಇ-ಆಫೀಸ್)

(ಉಮೇಶ ವಿ.ಕತ್ತಿ)

ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು

ಮತ್ತು ಗ್ರಾಹಕರ ವ್ಯವಹಾರಗಳ

ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು

## ರಾಜ್ಯದಲ್ಲಿ ವಿತರಿಸಿರುವ ಹೊಸ ಪಿ.ಹೆಚ್.ಹೆಚ್ ಪಡಿತರ ಚೀಟಿಗಳು (06-12-2021 ರವರೆಗೆ)

| ಕ್ರ.ಸಂ | ಜಿಲ್ಲೆಗಳು | ವಿತರಿಸಿದ ಪಡಿತರ ಚೀಟಿಗಳು | | ಒಟ್ಟು ವಿತರಿಸಿದ ಪಡಿತರ ಚೀಟಿಗಳು |
|---|---|---|---|---|
| | | 2019-20 | 2020-21 | |
| 1 | ಬಾಗಲಕೋಟೆ | 16863 | 41 | 16904 |
| 2 | ಬಳ್ಳಾರಿ | 12855 | 34 | 12889 |
| 3 | ಬೆಂಗಳೂರು ಪೂರ್ವ | 2397 | 44 | 2441 |
| 4 | ಬೆಂಗಳೂರು ಉತ್ತರ | 4167 | 47 | 4214 |
| 5 | ಬೆಂಗಳೂರು ದಕ್ಷಿಣ | 3566 | 33 | 3599 |
| 6 | ಬೆಂಗಳೂರು ಪಶ್ಚಿಮ | 6662 | 56 | 6718 |
| 7 | ಬೆಳಗಾವಿ | 36731 | 110 | 36841 |
| 8 | ಬೆಂಗಳೂರು | 15707 | 32 | 15739 |
| 9 | ಬೆಂಗಳೂರು ಗ್ರಾಮಾಂತರ | 2678 | 3 | 2681 |
| 10 | ಬೀದರ್ | 10431 | 7 | 10438 |
| 11 | ಚಾಮರಾಜನಗರ | 4821 | 23 | 4844 |
| 12 | ಚಿಕ್ಕಬಳ್ಳಾಪುರ | 5444 | 6 | 5450 |
| 13 | ಚಿಕ್ಕಮಗಳೂರು | 6136 | 25 | 6161 |
| 14 | ಚಿತ್ರದುರ್ಗ | 7693 | 25 | 7718 |
| 15 | ದಕ್ಷಿಣ ಕನ್ನಡ | 12212 | 33 | 12245 |
| 16 | ದಾವಣಗೆರೆ | 6162 | 38 | 6200 |
| 17 | ಧಾರವಾಡ | 8333 | 5 | 8338 |
| 18 | ಗದಗ | 6170 | 6 | 6176 |
| 19 | ಹಾಸನ | 9533 | 16 | 9549 |
| 20 | ಹಾವೇರಿ | 8266 | 31 | 8297 |
| 21 | ಕಲಬುರಗಿ | 20008 | 25 | 20033 |
| 22 | ಕೊಡಗು | 3440 | 1 | 3441 |
| 23 | ಕೋಲಾರ | 4937 | 1 | 4938 |
| 24 | ಕೊಪ್ಪಳ | 8413 | 13 | 8426 |
| 25 | ಮಂಡ್ಯ | 4036 | 3 | 4039 |
| 26 | ಮೈಸೂರು | 6986 | 10 | 6996 |
| 27 | ರಾಯಚೂರು | 21454 | 34 | 21488 |
| 28 | ರಾಮನಗರ | 5424 | 9 | 5433 |
| 29 | ಶಿವಮೊಗ್ಗ | 7898 | 29 | 7927 |
| 30 | ತುಮಕೂರು | 11025 | 5 | 11030 |
| 31 | ಉಡುಪಿ | 4277 | 55 | 4332 |
| 32 | ಉತ್ತರ ಕನ್ನಡ | 5494 | 4 | 5498 |
| 33 | ವಿಜಯಾಪುರ | 28136 | 27 | 28163 |
| 34 | ಯಾದಗಿರಿ | 10269 | 7 | 10276 |
| ಒಟ್ಟು | | **328624** | **838** | **329462** |

# ರಾಜ್ಯದಲ್ಲಿ ವಿತರಿಸಿರುವ ಹೊಸ ಎನ್.ಪಿ.ಹೆಚ್.ಹೆಚ್ ಪಡಿತರ ಚೀಟಿಗಳು
## (06-12-2021 ರವರೆಗೆ)

| ಕ್ರ.ಸಂ | ಜಿಲ್ಲೆಗಳು | ವಿತರಿಸಿದ ಪಡಿತರ ಚೀಟಿಗಳು | | ಒಟ್ಟು ವಿತರಿಸಿದ ಪಡಿತರ ಚೀಟಿಗಳು |
|---|---|---|---|---|
| | | 2019-20 | 2020-21 | |
| 1 | ಬಾಗಲಕೋಟೆ | 7681 | 850 | 8531 |
| 2 | ಬಳ್ಳಾರಿ | 6835 | 1365 | 8200 |
| 3 | ಬೆಂಗಳೂರು ಪೂರ್ವ | 470 | 30 | 500 |
| 4 | ಬೆಂಗಳೂರು ಉತ್ತರ | 4032 | 1546 | 5578 |
| 5 | ಬೆಂಗಳೂರು ದಕ್ಷಿಣ | 715 | 44 | 759 |
| 6 | ಬೆಂಗಳೂರು ಪಶ್ಚಿಮ | 1692 | 418 | 2110 |
| 7 | ಬೆಳಗಾವಿ | 14946 | 3784 | 18730 |
| 8 | ಬೆಂಗಳೂರು | 10590 | 4261 | 14851 |
| 9 | ಬೆಂಗಳೂರು ಗ್ರಾಮಾಂತರ | 1494 | 446 | 1940 |
| 10 | ಬೀದರ್ | 7627 | 825 | 8452 |
| 11 | ಚಾಮರಾಜನಗರ | 1711 | 564 | 2275 |
| 12 | ಚಿಕ್ಕಬಳ್ಳಾಪುರ | 1921 | 742 | 2663 |
| 13 | ಚಿಕ್ಕಮಗಳೂರು | 3742 | 1012 | 4754 |
| 14 | ಚಿತ್ರದುರ್ಗ | 4257 | 1221 | 5478 |
| 15 | ದಕ್ಷಿಣ ಕನ್ನಡ | 25301 | 3969 | 29270 |
| 16 | ದಾವಣಗೆರೆ | 4062 | 1336 | 5398 |
| 17 | ಧಾರವಾಡ | 10388 | 1717 | 12105 |
| 18 | ಗದಗ | 2917 | 9 | 2926 |
| 19 | ಹಾಸನ | 6827 | 1370 | 8197 |
| 20 | ಹಾವೇರಿ | 3051 | 346 | 3397 |
| 21 | ಕಲಬುರಗಿ | 9708 | 2218 | 11926 |
| 22 | ಕೊಡಗು | 4782 | 562 | 5344 |
| 23 | ಕೋಲಾರ | 3927 | 1039 | 4966 |
| 24 | ಕೊಪ್ಪಳ | 2837 | 25 | 2862 |
| 25 | ಮಂಡ್ಯ | 5416 | 564 | 5980 |
| 26 | ಮೈಸೂರು | 9791 | 3863 | 13654 |
| 27 | ರಾಯಚೂರು | 4419 | 508 | 4927 |
| 28 | ರಾಮನಗರ | 2897 | 997 | 3894 |
| 29 | ಶಿವಮೊಗ್ಗ | 5601 | 1622 | 7223 |
| 30 | ತುಮಕೂರು | 9990 | 1986 | 11976 |
| 31 | ಉಡುಪಿ | 7765 | 3602 | 11367 |
| 32 | ಉತ್ತರ ಕನ್ನಡ | 4804 | 244 | 5048 |
| 33 | ವಿಜಯಾಪುರ | 8434 | 1352 | 9786 |
| 34 | ಯಾದಗಿರಿ | 2526 | 524 | 3050 |
| | **ಒಟ್ಟು** | **203156** | **44961** | **248117** |